# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 62/2021 ಸಿಡಬ್ಲೂ: 3 ಪಿಡಬ್ಲೂ: 4

ಪ್ರಮಾಣವಚನ ಬೋಧಿಸಲಾಯಿತು ದಿಃ 21-11-2024

ಹೆಸರು : ರಶೀದ್ ಮೀಯಾ

ತಂದೆ ಹೆಸರು : ನಬೀ ಸಾಬ್

ವಯಸ್ಸು : 50 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಹೂಡಗಿ ಗ್ರಾಮ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಸ್ಥಳದ ಪಂಚನಾಮೆಯಾಗಿದ್ದು ಸಾಕ್ಷಿಯು ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ ಹಾಗು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ಪಂಚನಾಮೆಗೆ ಕರೆಯಿಸಿದರು. ಪಂಚನಾಮೆಯ ಅವಧಿಯಲ್ಲಿ ಚಾಸಾ 2 ರವರು ನನ್ನ ಜೊತೆಯಿಲ್ಲಿದ್ದರು. ಸುಮಾರು 3 ವರ್ಷಗಳ ಹಿಂದೆ ಮಧ್ಯಾಹ್ನ 03-00 ಗಂಟೆಯಿಂದ 04-30 ಗಂಟೆಯ ವರೆಗೆ ಪಂಚನಾಮೆಯನ್ನು ಮಾಡಿರುತ್ತಾರೆ. ಪಂಚನಾಮೆಯ ಅವಧಿಯಲ್ಲಿ ಒಂದು ಬಡಿಗೆಯನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಸದರಿ ಬಡಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ಮು ಮಾ -1 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎಚ್ ಎಲ್ ಎ ವಕೀಲರಿಂದ ಃ

ನನ್ನ ಮನೆಯಿಂದ ಘಟನೆ ನಡೆದ ಸ್ಥಳವು 500 ಅಡಿ ಅಂತರದಲ್ಲಿದೆ. ಮುಂದುವರೆದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮನೆ ಗಾಯರಾಯಿನಿ ಜಮೀನಿನಲ್ಲಿದೆ ಎಂದರೆ ಸರಿ. ಸದರಿ ಜಾಗ ನಾನು ಖರೀದಿಸಿಲ್ಲ. ನನಗೆ ಸರ್ಕಾರದವರು ಕೊಟ್ಟಿರುತ್ತಾರೆ. ಸದರಿ ಜಮೀನು ಗಾಯರಾಯಿನಿ ಜಮೀನು ಇರುವುದರಿಂದ ಯಾರಿಗಾದರು ಮಾರಾಟ ಮಾಡಲು ಅಥವಾ ಖರೀದಿಸಲು ಬರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳದಿಂದ ಪೊಲೀಸ್ ಠಾಣೆ ಎಷ್ಟು ಕಿ ಮಿ ಅಂತರದಲ್ಲಿದೆ ಎಂದು ನನನಗೆ ಗೊತ್ತಿಲ್ಲ. ಘಟನಾ ಸ್ಥಳಕ್ಕೆ ಪೋಲೀಸರು 03-00 ರಿಂದ 03-30 ಸುಮಾರಿಗೆ ಬಂದಿದ್ದರು. ಪಂಚನಾಮೆ ಮಾಡಲು ನನಗೆ ಹಾಗೂ ಚಾ ಸಾ 2 ರವರಿಗೆ ಕರೆಯಿಸಿದರು. ನನ್ನ ಮನೆ ಗಾಯರಾಯಿನಿ ಜಮೀನಿನಲ್ಲಿದೆ ಅಲ್ಲಿಗೆ ಮನೆ ಕಟ್ಟವುದು ಸರಿ ಇಲ್ಲ ಎಂದು ಕೇಳಿದರು ಎಂದರೆ ಸರಿಯಿಲ್ಲ. ಆ ವಿಷಯಕ್ಕೆ ನನ್ನ ಮನಸ್ಸಿ

ನಲ್ಲಿ ದ್ವೇಷ ಇಟ್ಟುಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಮು ಮಾ -1 ರಲ್ಲಿರುವ ಬಡಿಗೆ ಸಾಮಾನ್ಯವಾಗಿ ಎಲ್ಲಾ ಕಡೆಗೆ ಲಭ್ಯ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಇದೆ ಬಡಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಪೊಲೀಸರು ½ ಗಂಟೆಯಿಂದ 01-00 ಗಂಟೆಯ ವರೆಗೆ ಪಂಚನಾಮೆ ಮಾಡಿರುತಾರೆ. ನನಗೆ ಪೊಲೀಸರು ಬಂದು ಪಂಚನಾಮೆ ಮಾಡಿ ನನಗೆ ಸಹಿ ಮಾಡಲು ಹೇಳಿದಕ್ಕೆ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**